

## ಕಿಕಿ ಆಯರ್ಸ್




ಸೆಲೆಬ್ರಿಟಿ ಪ್ರಚಾರಕಿ, ವಾಣಿಜ್ಯೋದ್ಯಮಿಯೂ ಆಗಿರುವ ಕಿಕಿ ಆಯರ್ಸ್, ಅಮೆರಿಕದಲ್ಲಿ 'ಆಯರ್ ಪಬ್ಲಿಸಿಟಿ' ಸಂಸ್ಥೆ ಸಂಸ್ಥಾಪಕಿ ಕೂಡ.

'ಸಿಂಗಲ್ ಮದರ್ ಎನ್ನುವುದು ಮಿತಿಯಲ್ಲ, ಅದೊಂದು ಶಕ್ತಿ' ಎಂದು ಹೇಳುತ್ತಲೇ, ಮಗುವನ್ನು ಬೆಳೆಸುತ್ತಾ ವೃತ್ತಿಯನ್ನೂ ಕಟ್ಟಿಕೊಂಡ ಸ್ಫೂರ್ತಿದಾಯಕ ಕಥೆಗೆ ಸಾಕ್ಷಿಯಾಗಿದ್ದಾರೆ.

'ಸಿಂಗಲ್ ಮಾಮ್ ಆಗಬೇಕೆಂದು ಬಯಸಿರಲಿಲ್ಲ. ಆದರೆ ನಮ್ಮ ನಿರೀಕ್ಷೆಯಂತೆ ಬದುಕು ನಡೆಯುವುದಿಲ್ಲ. ಐದು ತಿಂಗಳು ಗರ್ಭಿಣಿಯಾಗಿದ್ದಾಗಲೇ ಅತಿ ಕಷ್ಟದ ನಿರ್ಧಾರ ತೆಗೆದುಕೊಳ್ಳಬೇಕಿತ್ತು. ಸಂಬಂಧದಿಂದ ಹೊರಬಂದೆ. ಅದೇನೂ ಸುಲಭವಾಗಿರಲಿಲ್ಲ. ಆದರೆ ಮಗುವನ್ನು ಆರೋಗ್ಯಕರ ವಾತಾವರಣದಲ್ಲಿ ಬೆಳೆಸಬೇಕಿತ್ತು. ಪೇರೆಂಟಿಂಗ್ ಎನ್ನುವುದು ಪರ್ವ ಕಾಲ. ನನ್ನ ಬಾಲ್ಯವನ್ನು ಮತ್ತೆ ನೋಡುತ್ತಾ ಬೆಳೆಯುವ ಅವಕಾಶ ನನ್ನದಾಗಿತ್ತು. ಏನನ್ನು ಕಂಡಾಗಲೂ ಉತ್ಸಾಹ ತುಂಬಿಕೊಳ್ಳುತ್ತಿದ್ದ ಮಗನೇ ಜೀವನವನ್ನು ಮತ್ತಷ್ಟು ಪ್ರೀತಿಸುವಂತೆ ಮಾಡಿದ್ದು' ಎಂದು ಖುಷಿಯಿಂದ ಹೇಳಿಕೊಂಡಿದ್ದಾರೆ.



### ಸಿಂಗಲ್ ಮದರ್ ಪೇರೆಂಟಿಂಗ್

ಯಾವುದೇ ವಿವಾಹಿತ ಮಹಿಳೆಯು ತನ್ನ ಮಗು ಅಥವಾ ಮಕ್ಕಳನ್ನು ಏಕಾಂಗಿಯಾಗಿ ಸಲಹುವುದು (ಸಂಗಾತಿಯ ಬೆಂಬಲವಿಲ್ಲದೆ) 'ಸಿಂಗಲ್ ಮದರ್ ಪೇರೆಂಟಿಂಗ್' ಎನ್ನಲಾಗುತ್ತದೆ. ಈ ಏಕ ಪೋಷಣೆಗೆ ಕಾರಣ ಹಲವು: ಪತಿ ಸಾವನ್ನಪ್ಪುವುದು, ವಿಚ್ಛೇದನವಾಗುವುದು, ಯಾವುದೋ ಕಾರಣದಿಂದ ಗಂಡ ಹೆಂಡತಿ ದೂರವಾಗುವುದು – ಇಂಥ ಸಂದರ್ಭಗಳಲ್ಲಿ ತಾಯಿಯೊಬ್ಬಳೇ ಮಗುವನ್ನು ಸಾಕುವ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಮದುವೆಯೇ ಆಗದೆ, ತಾಯ್ತನದ ಹಂಬಲದಲ್ಲಿ ಮಗು ಪಡೆದು ಸಲಹುವವರೂ ಇದ್ದಾರೆ. ಒಂದು ಕುಟುಂಬದ ಚೌಕಟ್ಟಿನಲ್ಲಿ ತಾಯಿಯೇ ತಂದೆಯಾಗಿಯೂ ತನ್ನ ಪಾತ್ರ ನಿರ್ವಹಿಸುತ್ತಾ ಮಗುವಿನ ಪೋಷಣೆಗೆ ಅಗತ್ಯವಾದ ಎಲ್ಲ ಸೌಲಭ್ಯಗಳನ್ನೂ ತಾನೊಬ್ಬಳೇ ನೀಡುತ್ತಾ ನಿಭಾಯಿಸುತ್ತಾಳೆ.

ಹಿಂದೆಲ್ಲ 'ಸಿಂಗಲ್ ಮದರ್ ಪೇರೆಂಟಿಂಗ್' ಎನ್ನುವುದು ಅನಿವಾರ್ಯ ಆಯ್ಕೆಯಾಗಿತ್ತು. ಈಗ ಕೆಲವು ಸ್ವತಂತ್ರ ಮನೋಭಾವದ ಹೆಣ್ಣುಮಕ್ಕಳು ಪ್ರಜ್ಞಾಪೂರ್ವಕವಾಗಿ ಏಕ ಪೋಷಕರಾಗಲು ಬಯಸುತ್ತಿದ್ದಾರೆ. ಮದುವೆಯ ಚೌಕಟ್ಟಿಗೆ ಒಳಪಡದೆ ಸ್ವತಂತ್ರವಾಗಿ ಜೀವಿಸಲು ಬಯಸುವ ಹೆಣ್ಣುಮಕ್ಕಳ ಸಂಖ್ಯೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದೆ.

ಈ ಮುನ್ನ ಕೆಲವು ಮಹಿಳೆಯರಿಗೆ ಒಂಟಿ ತಾಯ್ತನ ಅಥವಾ ಗಂಡನ ನೆರವಿಲ್ಲದೆ ಮಕ್ಕಳನ್ನು ಪೋಷಿಸುವುದು ಅನಿವಾರ್ಯ ಎನಿಸಿದ್ದರೆ, ಈಗ ಅದು ಧೈರ್ಯದ